**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,ರವರ ನ್ಯಾಯಾಲಯ, ಕಡೂರು**

**ಓ.ಎಸ್.ನಂ.376/2016**

**ದಿನಾಂಕಃ17.09.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

ಡಿ.ಡಬ್ಲ್ಯುಃ1

**ಮುಖ್ಯ ವಿಚಾರಣೆಃ 1 ರಿಂದ 3 ನೇ ಪ್ರತಿವಾದಿಗಳ ಪರ ಶ್ರೀ.ಕೆ. ಎಸ್.ಆರ್.ವಕೀಲರಿಂದಃ-**

ನಾನು 1 ನೇ ಪ್ರತಿವಾದಿಯಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸುತ್ತಿದ್ದೇನೆ. ಅದನ್ನು ಓದಿ, ತಿಳಿದು, ಸಹಿ ಮಾಡಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

ನಾನು ನನ್ನ ಮುಖ್ಯ ವಿಚಾರಣೆಯೊಂದಿಗೆ ಅಸಲು ದಾವಾ ಸಂಖ್ಯೆ388/2016 ರಲ್ಲಿ ನಾನು ಸಾಕ್ಷ್ಯ ನುಡಿದಿರುವ ಬಗ್ಗೆ ಸಾಕ್ಷ್ಯ ಹೇಳಿಕೆಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-1 ಎಂದು, ದಿಃ18.02.2016 ರ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-2 ಎಂದು , ಅಸೆಸ್ಮೆಂಟ್ ರಿಜಿಸ್ಟರಿನ ದೃಢೀಕೃತ ನಕಲನ್ನು ನಿಡಿ-3 ಎಂದು, ಕಂದಾಯ ಪಾವತಿ ರಶೀದಿಯ ದೃಢೀಕೃತ ನಕಲನ್ನು ನಿಡಿ-4 ಎಂದು, ಚಕ್ಕುಬಂದಿ ದೃಢೀಕರಣದ ದೃಢೀಕೃತ ನಕಲನ್ನು ನಿಡಿ-5 ಎಂದು, ದಿಃ25.07.1964 ರ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ, ಅದನ್ನು ನಿಡಿ-6 ಎಂದು, ದಿಃ24.09.2015 ರ ತಿದ್ದುಪಡಿ ಪತ್ರದ ದೃಢೀಕೃತ ನಕಲನ್ನು ನಿಡಿ-7 ಎಂದು, ಮಾಹಿತಿ ಹಕ್ಕಿನ ಅಡಿ ಕಡೂರು ಪುರಸಭೆ ಅವರಿಗೆ ನೀಡಿದ ಅರ್ಜಿಯ ಸ್ವೀಕೃತಿಯನ್ನು ಒಳಗೊಂಡ ಅರ್ಜಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ-8 ಎಂದು, ಪುರಸಭೆ, ಕಡೂರು ಅವರು ಮಾಹಿತಿ ಹಕ್ಕಿನ ಅಡಿ ಮಾಹಿತಿ ಕೋರಿದ ಮೇರೆಗೆ ನೀಡಿರುವ ಪತ್ರದ ದೃಢೀಕೃತ ನಕಲನ್ನು ನಿಡಿ-9 ಎಂದು, ಪುರಸಭೆ, ಕಡೂರು ಅವರು ನೀಡಿರುವ ನಮೂನೆ-3 (ಇ-ಖಾತಾದ) ದೃಢೀಕೃತ ನಕಲುಗಳನ್ನು ನಿಡಿ-10 ಮತ್ತು ನಿಡಿ-11 ಎಂದು ಗುರುತಿಸಲಾಯಿತು. ಮೇಲಿನ ದಾಖಲೆಗಳನ್ನು ಪರಿಗಣಿಸಿ ವಾದಿಯ ದಾವೆಯನ್ನು ವಜಾಗೊಳಿಸಬೇಕೆಂದು ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲಿಗಾಗಿ ಸಮಯ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ದೀಪು ಎಂ.ಟಿ.)
3 ನೇ.ಹೆ.ಪ್ರಃದಃನ್ಯಾಃದಂ.,ರವರು, ಕಡೂರು.